ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರ ಗಳನ್ನು ಕೊಡಲು ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಇರಬೇಕೆಂದು ಆಜ್ಞೆ ಮಾಡುತ್ತೇನೆ.

XVII ಬೆಳ್ತಂಗಡಿ ತಾಲ್ಲೂಕು ವೇಣೂರು ಪೋಲೀಸ್ ಠಾಣೆಯಲ್ಲಿರುವ ಸಬ್‌ಇನ್ಸ್‌ಪೆಕ್ಟರ್ ಅವರ ಕಾರ್ಯವೈಖರಿ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರವಾದ ಬೆಳ್ತಂಗಡಿ ತಾಲ್ಲೂಕಿನ ವೇಣೂರು ಪೋಲೀಸ್ ಠಾಣೆಯಲ್ಲಿ ಶ್ರೀ ನೀಲಕಂಠ ಎಂಬುವರು ಎಸ್.ಐ. ಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರ ಕಾರ್ಯವೈಖರಿ ಬಹಳ ವಿಚಿತ್ರವಾದದ್ದು. ಸ್ಟೇಷನ್ನಿಗೆ ಅರ್ಜಿ ತಂದು ಕೊಡುವಾಗ ಅರ್ಜಿಯೊಂದಿಗೆ ನೋಟೀಸ್ ಕವರು ಇರದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸುತ್ತಾರೆ. ಅದಿಲ್ಲದೇ ಹೋದರೆ ಕನಿಷ್ಟ ಒಂದು ಬಾಟ್ಲಿ ವಿಸ್ಕಿಯನ್ನಾದರೂ ಕೊಡಬೇಕು. ಆದಾದನಂತರ ಯಾರ ಮೇಲೆ ಅರ್ಜಿ ಕೊಟ್ಟಿದ್ದಾರೋ ಅಲ್ಲಿಗೆ ಅವರೇ ಸ್ವತಃ ಬಾಡಿಗೆ ಕಾರು ಮಾಡಿ ಕೊಂಡು ಹೋಗಿ ಇಳಿದ ಕೂಡಲೇ ಕಾರಿನ ಬಾಡಿಗೆ ೩೦೦ ರೂಪಾಯಿಗಳು ಕೊಡು ಎಂದುಹೇಳಿ ಅದನ್ನು ಪಡೆದಾದ ನಂತರ ನಿನ್ನಮೇಲೆ ಬೇರೆಯವರು ಅರ್ಜಿ ಸಲ್ಲಿಸಿರುತ್ತಾರೆ. ಅವನು ಅರ್ಜಿಯೊಂದಿಗೆ ರೂ. ೫೦೦ನ್ನು ಕೊಟ್ಟಿರುತ್ತಾನೆ. ನೀನು ಎಷ್ಟುಕೊಡುತ್ತೀಯಾ ಎಂದು ಗದರಿಸಿ ಅವನಿಂದ ಹೆಚ್ಚು ಹಣವನ್ನು ಪಡೆದು ವಾಪಸ್ಸು ಹೋಗುವುದು ರೂಢಿಯಾಗಿ ಈಗ ಸ್ಟೇಷನ್ನಿನಲ್ಲಿ ಅರ್ಜಿ ಸಲ್ಲಿಸಲು ಜನರು ಭೀತರಾಗಿದ್ದಾರೆ. ಬೆಳಿಗ್ಗೆಯೇ ಕುಡಿದು ಅಮಲು ಮತ್ತರಾಗಿ ಕಾರು ಬಾಡಿಗೆ ಮಾಡಿಕೊಂಡು ಎಲ್ಲಾ ಗ್ರಾಮಗಳಿಗೆ ಸುತ್ತಾಡಿ ಹೋದಲ್ಲೆಲ್ಲಾ ಕಾರು ಬಾಡಿಗೆಯನ್ನು ಬಲಾತ್ಕಾರದಿಂದ ವಸೂಲಿ ಪಡೆದು ವಾಪಸ್ಸು ಬರುವುದು ಇವರ ರೂಢಿಯಾಗಿದೆ. ಇತ್ತೀಚೆಗೆ ನಮ್ಮ ತಾಲ್ಲೂಕಿನಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದ ಶ್ರೀಧರ ಶೆಟ್ಟಿಯವರು ಸ್ಕೂಟರ್ ಅಪಘಾತದಲ್ಲಿ ಮೃತರಾದ ಸಂದರ್ಭ ಸದರಿ ಎಸ್.ಐ.ಯವರು ಕುಡಿದು ಅಮಲು ಮತ್ತರಾಗಿ ಆಸ್ಪತ್ರೆಗೆ ಬಂದು ಸಡೆಯಲಾಗದೆ ಬರೆಯಲು ಆಗದೆ, ಮಾತನಾಡಲೂ ಕೂಡ ಆಗದೆ ಜನರು ಚೀಮಾರಿ ಹಾಕಿದ್ದಾಯಿತು. ಅಲ್ಲದೇ ಅಂದಿನ ಎಲ್ಲಾ ರಿಕಾರ್ಡುಗಳನ್ನೂ ಹಾಗೂ ಮಹಜರುಗಳನ್ನು ಬೆಳ್ತಂಗಡಿ ಎಸ್.ಐ.ಯವರು ಮಾಡ ಬೇಕಾಯಿತು. ಸಾಯಂಕಾಲವಾದಂತೆ ಕುಡಿದು ತೂರಾಡಿಕೊಂಡು ಮಾರ್ಗದ ಬದಿಯಲ್ಲಿ ನಿಂತು ಮಾರ್ಗದಲ್ಲಿ ಹೋಗುವವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರಿಂದಲೂ ಬೈಗಳನ್ನು ತಿಂದು ಸುಮ್ಮನಾಗುವ ದೃಶ್ಯ ಬಹಳ ನಾಚಿಕೆಗೇಡಿನದ್ದಾಗಿದೆ. ಈಗ ಅವರನ್ನು ಜನರೆಲ್ಲಾ ನೀಲಕಂಠ ಎಂದು ಕರೆಯುವುದರ ಬದಲಾಗಿ ''ತೇಲ್‌ಕಂಠ'' ಎಂದು ಕರೆಯುತ್ತಾರೆ. ಸದರಿಯವರನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಸೂಕ್ತ ತನಿಖೆ ನಡೆಸಿ ತಕ್ಕ ಕ್ರಮ ಕೈಗೊಂಡು ನ್ಯಾಯ ಕಾಪಾಡಬೇಕಾಗಿ ಈ ಮೂಲಕ ವಿನಂತಿಸುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆ ವೇಣೂರು ಪೋಲೀಸ್ ಠಾಣೆ ಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ನೀಲಕಂಠ, ಸಬ್—ಇನ್ಸ್‌ಪೆಕ್ಟರ್, ಇವರ ಬಗ್ಗೆ ಎಸ್.ಪಿ.ಯವರಿಗೆ ಯಾವ ತರಹವಾದ ದೂರು ಬಂದಿಲ್ಲ. ಇವರು ಕುಡಿದ ಅಮಲಿನಲ್ಲಿ ವರ್ತಿಸುತ್ತಾರೆಂದು ಹಾಗೂ ಶ್ರೀ ಶ್ರೀಧರ ಶೆಟ್ಟಿಯವರ ಅಪಘಾತದ ಪ್ರಕರಣದ ಸಮಯದಲ್ಲಿ ಇವರು ಕುಡಿದಿದ್ದರು ಹಾಗೂ ಸಾರ್ವಜನಿಕರು ಛೀಮಾರಿ ಹಾಕಿದರೆಂದು ದೂರು ಬಂದಿಲ್ಲ. ಅರ್ಜಿದಾರರನ್ನು ಸ್ವತಃ ಬಾಡಿಗೆ ಕಾರು ಮಾಡಿಕೊಂಡು ಮುನ್ನೂರು ರೂಪಾಯಿಗಳನ್ನು ಕೊಡು ಎಂದು ಕೇಳಿದ ದೂರು ಸಹ ಬಂದಿಲ್ಲ. ಆದರೂ, ಮಾನ್ಯ ವಿಧಾನ ಸಭಾ ಸದಸ್ಯರು ಮಾಡಿರುವ ಆಪಾದನೆಗಳು ಉಗ್ರತರವಾದುದರಿಂದ ಆ ಕ್ಷೇತ್ರದ ಡಿ.ಎಸ್.ಪಿ. ಯವರನ್ನು ಈ ಬಗ್ಗೆ ಖುದ್ದು ವಿಚಾರಿಸಿ ಇನ್ನು ಹದಿನೈದು ದಿನಗಳೊಳಗಾಗಿ ವರದಿ ಕೊಡಬೇಕೆಂದು ಕೇಳಲಾಗಿದೆ. ವರದಿಯಲ್ಲಿ ಆಪಾದನೆಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಬಂದರೆ ಸದರಿ ಸಬ್—ಇನ್ಸ್‌ಪೆಕ್ಟರ್ ಮೇಲೆ ಇಲಾಖಾ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳ ಲಾಗುವುದು.

XVIII Non-release of salary grants to the aided institutions of Raichur, Gulbarga and Bidar Districts

SRI MALLIKARJUNA M. KHARGE (Gurumitkal).—Due to non-availability of funds with the DDPIs of Raichur. Gulbarga and